# ಸದಾ ಅನುರಣಿಸುವ ಜೋಗುಳದ ಶ್ರುತಿ

■ ಸೃಜನಾ ಕಾಯ್ಕಿಣಿ



ಸುಲಭವಾಗಿ ‘ನಿರ್ವಿಕಾರ ಚಿತ್ತ’ನಾಗುವುದು ಪಪ್ಪನ ವಿಶೇಷ ಗುಣ. ಬಹುಪಾಲು ಅವನು ಹಾಗೆಯೇ ಇರುತ್ತಾನೆ. ಹೀಗಾಗಿ ಎಂಥ ವ್ಯತಿರಿಕ್ತ ಪ್ರಸಂಗದಲ್ಲೂ, ಗೊಂದಲಗಳ ನಡುವೆಯೂ ವಿಚಲಿತನಾಗದೆ ಬರೆಯಲು ಅವನಿಗೆ ಸಾಧ್ಯವಾಗಿದೆ.

ಕೌಟುಂಬಿಕತೆ ಮತ್ತು ಘನತೆ ತುಂಬ ಮುಖ್ಯ ಅವನಿಗೆ. ‘ತೇರೆ ಕೊ ಮೇರೆ ಕೋ’ ಎಂದು ಸಲಿಗೆಯ ಏಕವಚನದಲ್ಲಿ ಮಾತನಾಡುವ ‘ಮುಂಬಯಿ ಹಿಂದಿ’ ಅವನಿಗೆ ಇಷ್ಟ. ಅದು, ಎಲ್ಲ ಸ್ತರಗಳನ್ನು ಒಂದಾಗಿಸುವ, ಕೌಟುಂಬಿಕತೆಯ ಅಭಿವ್ಯಕ್ತಿ ಎಂಬ ಕಾರಣಕ್ಕೇ ಅದನ್ನು ಅವನು ಸಂಭ್ರಮಿಸುತ್ತಾನೆ. ಕಳೆದ ನಾಲ್ಕು ದಶಕಗಳ ನಾನಾ ನಮೂನೆಯ ಬರವಣಿಗೆಯ ಹಿನ್ನೆಲೆಯಲ್ಲಿ ಅವನ ಈಚಿನ ‘ಗೀತರಚನಕಾರ’ನ ಅವತಾರ ನನಗೆ ತುಂಬ ವಿಶಿಷ್ಟ ಅನಿಸಿದೆ. ಆ ಕುರಿತು ಅಭಿಮಾನವೂ ಹೆಚ್ಚುತ್ತಿದೆ.

ನನ್ನ ಅಜ್ಜ ಗೌರೀಶ ಕಾಯ್ಕಿಣಿ ಶಾಲೆಯ ನಾಟಕಗಳಿಗೆ, ಕಾರ್ಯಕ್ರಮಗಳಿಗೆ ಹಾಡು, ಸ್ವಾಗತಗೀತೆ ಇತ್ಯಾದಿಗಳನ್ನು ಬರೆಯುತ್ತಿದ್ದರು. ಧಾಟಿಯನ್ನೂ ಅವರೇ ಸಂಯೋಜಿಸಿ ಹಾಡಿಸುತ್ತಿದ್ದರು. ನಾವು ಪುಟ್ಟವರಾಗಿದ್ದಾಗ ನಮ್ಮನ್ನು ಮಲಗಿಸಲು ಜೋಗುಳಗಳನ್ನೂ ಬರೆದಿದ್ದರು. ಅವರ ‘ಕೌಸಲ್ಯಾ ಮಡಿಲಲ್ಲಿ ಶ್ರೀರಾಮಾ, ವಟವೃಕ್ಷದೆಲೆಯಲ್ಲಿ ಘನಶ್ಯಾಮಾ, ಮುಗಿಲ ತೊಟ್ಟಿಲಿನಲ್ಲಿ ಚಂದ್ರಮಾ...’ ಎಂಬ ಜೋಗುಳವನ್ನು ಹಾಡಿಯೇ ಪಪ್ಪ ನನ್ನನ್ನೂ ನನ್ನ ತಮ್ಮನನ್ನೂ ಮಲಗಿಸುತ್ತಿದ್ದ. ಆ ಕೌಟುಂಬಿಕ ವಾತ್ಸಲ್ಯವನ್ನು ಪಪ್ಪ ಈಗ ತನ್ನ ಗೀತೆಗಳ ಮೂಲಕ ಎಲ್ಲಾ ಶ್ರೋತೃಗಳಿಗೆ ವಿಸ್ತರಿಸುತ್ತಿದ್ದಾನೆ ಅಂತ ಅನಿಸುತ್ತದೆ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಹೂವುಗಳು, ಹಕ್ಕಿಯ ಚಿಲಿಪಿಲಿಗಳು ನಮ್ಮನ್ನು ಇದ್ದಲ್ಲೇ ಉಲ್ಲಸಿತಗೊಳಿಸುವಂತೆ ಈ ಹಾಡುಗಳು ನಮ್ಮನ್ನು ನೇವರಿಸಿ ಮಂದಹಾಸ ಮೂಡಿಸುತ್ತವೆ.

ಪಪ್ಪನ, ಮಗುವಿನಂಥ ಮನಸ್ಥಿತಿಯನ್ನು ನಮ್ಮಲ್ಲೂ ಕಾದಿಟ್ಟುಕೊಂಡು ಮುಂದುವರಿಸಲು, ಒಂದು ಸರಳ ಹಾಡಿನಂತೆ ಈ ಜಗದಲ್ಲಿ ಜೀವಿಸಲು ಪ್ರಯತ್ನಿಸುವುದೇ ನನ್ನ ಮತ್ತು ತಮ್ಮನ ತುಡಿತವಾಗಿದೆ. ■

**ಪಪ್ಪನ ನಾನಾ ನಮೂನೆಯ ಬರವಣಿಗೆಯ ಹಿನ್ನೆಲೆಯಲ್ಲಿ ಅವನ ಈಚಿನ ‘ಗೀತರಚನಕಾರ’ನ ಅವತಾರ ನನಗೆ ತುಂಬ ವಿಶಿಷ್ಟ ಅನಿಸಿದೆ.**



# ಸೊಗಸುಗಾರ, ದಾನಶೂರ

■ ಮಾನ್ವಿತಾ ಕಾಮತ್
ನಟಿ



**ಅಪ್ಪನ ಪ್ರತಿಭೆಗೆ ಕೊನೆಗೂ ಸರಿಯಾದ ಅವಕಾಶ ಸಿಕ್ಕಲೇ ಇಲ್ಲ.**

ನಂಗೆ ನೀರು ಅಂದರೆ ಸಿಕ್ಕಾಪಟ್ಟೆ ಭಯ. ಆದ್ರೆ ನನ್ನ ತಂದೆ ನೀರಿನ ಮೇಲೆ ಯೋಗಾಸನ ಮಾಡ್ತಿದ್ರು. ಚಿಕ್ಕಂದಿನಲ್ಲಿ ಸ್ವಿಮ್ಮಿಂಗ್ ಹೋಗುವಾಗ ನನ್ನೂ ಕರ್ಕೊಂಡು ಹೋಗ್ತಿದ್ರು. ಅವರು ಈಜುವುದನ್ನು ನೋಡುತ್ತಿದ್ದೆ. ಅವರ ರೀತಿ ಈಜುವವರು, ನೀರಿನೊಳಗೆ ಡೈವ್ ಹೊಡೆಯುವವರನ್ನು ನಾನು ನೋಡಿಯೇ ಇಲ್ಲ. ಆ ಚಿತ್ರಗಳೆಲ್ಲ ಈಗಲೂ ನನ್ನ ಕಣ್ಮುಂದೆ ಹಾಗೆಯೇ ಕಾಡುತ್ತದೆ.

ಅವರು ನೋಡಲಿಕ್ಕೆ ತುಂಬ ಸುಂದರವಾಗಿದ್ದರು. ನನ್ನನ್ನು ಹೆಗಲ ಮೇಲೆ ಕೂರಿಸಿಕೊಂಡು ಸ್ಕೂಲಿಗೆ ಕರ್ಕೊಂಡು ಹೋಗಿಬಿಡುತ್ತಿದ್ದರು. ಯಾವತ್ತೋ ಒಂದು ದಿನ ಅಪ್ಪ ನನ್ನ ಜತೆ ಬಂದಿಲ್ಲ ಅಂದರೆ ಎಲ್ಲ ಟೀಚರ್‌ಗಳು ‘ಈವತ್ತು ನಿಮ್ಮ ಅಪ್ಪ ಬಂದಿಲ್ವಾ?’ ಎಂದು ವಿಚಾರಿಸುತ್ತಿದ್ದರು.

ಅಪ್ಪ ದೊಡ್ಡ ದಾನಶೂರ ಕರ್ಣ. ನನಗೆ ಕೊಡಲೆಂದು ಚಾಕೊಲೇಟ್ ತೆಗೆದುಕೊಳ್ಳುತ್ತಿದ್ದರು. ಆದರೆ ಮನೆಗೆ ತಲುಪುವಷ್ಟರಲ್ಲಿ ಒಂದೇ ಒಂದು ಉಳಿದಿರುತ್ತಿತ್ತು. ರಸ್ತೆಯಲ್ಲಿ ಕಾಣುವ ಎಲ್ಲ ಮಕ್ಕಳಿಗೂ ಚಾಕೊಲೇಟ್ ಕೊಟ್ಟು ಬರುತ್ತಿದ್ದರು. ನಾನು ಅಳುತ್ತಿದ್ದೆ, ‘ನೀವ್ಯಾಕೆ ಎಲ್ಲರಿಗೂ ಕೊಟ್ಟುಕೊಂಡು ಬಂದ್ರಿ?’ ಅಂತ. ಆಗ ಅವರು ‘ನಮ್ಮಲ್ಲಿ ಇರುವುದನ್ನು ಹಂಚಿಕೊಂಡು ತಿನ್ನಬೇಕು’ ಎಂದು ಸಮಾಧಾನ ಮಾಡುತ್ತಿದ್ದರು.

ಕಮ್ಮಿ ಮಾತಾಡುತ್ತಿದ್ದರು. ಆದರೆ ತೂಕಬದ್ಧವಾದ ಮಾತುಗಳನ್ನೇ ಆಡುತ್ತಿದ್ದರು. ಎಸ್‌ಎಸ್‌ಎಲ್‌ಸಿಯಲ್ಲಿ ನಂಗೆ ಒಳ್ಳೆಯ ಅಂಕಗಳು ಬಂದಿದ್ದವು. ಅಪ್ಪ ನನ್ನನ್ನು ಸೈನ್ಸ್‌ಗೆ ಸೇರಿಸಿದ್ದರು. ಆದರೆ ಪಿಯುಸಿಯಲ್ಲಿ ನನ್ನ ಆಸಕ್ತಿ ಬದಲಾಗಿತ್ತು. ಸಿನಿಮಾ ನಿರ್ದೇಶನ ಕಲಿಯಬೇಕು ಅನಿಸತೊಡಗಿತ್ತು. ಅದನ್ನೇ ಅಪ್ಪನ ಬಳಿ ಹೇಳಿದೆ. ಅಪ್ಪ ಹೇಳಿದ್ದಿಷ್ಟೆ: ‘ನೀನು ಸೈನ್ಸ್ ಬಿಟ್ಟರೆ ಮರ್ಯಾದೆ ಹೋಗತ್ತೆ ಎಂಬೆಲ್ಲ ಬೇಜಾರು ನಂಗಿಲ್ಲ. ಆದರೆ ನೀನು ಏನು ಮಾಡಬೇಕು ಅಂದುಕೊಂಡಿದ್ದೆಯೋ ಅದರ ಕುರಿತು ಕೂತು ಸ್ಪಷ್ಟವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಾ. ಒಮ್ಮೆ ಸಿನಿಮಾ ಕೋರ್ಸ್ ತೆಗೆದುಕೊಂಡ ಮೇಲೆ, ನಾನಿದನ್ನು ಮಾಡಬಾರದಿತ್ತು ಅಂತ ನಿನಗೆ ಅನಿಸಬಾರದು. ನಿರ್ಧಾರ ನಿನ್ನದೇ’ ಎಂದರು. ಬೇರೆ ಯಾರೇ ಆಗಿದ್ದರೂ ಬೇಜಾರು ಮಾಡಿಕೊಳ್ಳುತ್ತಿದ್ದರು. ಆದರೆ ಅಪ್ಪ ಯಾವಾಗಲೂ ತುಂಬ ಕೂಲ್. ಯಾವುದೇ ವಿಷಯವನ್ನು ಸಮಚಿತ್ತದಿಂದ ನೋಡುತ್ತಿದ್ದರು.

ನನಗೆ ಈಗಿರುವ ಯಾವುದೇ ಕೌಶಲಗಳನ್ನೂ ನಾನು ತರಬೇತಿ ಪಡೆದುಕೊಂಡು ಬಂದಿರುವುದಲ್ಲ. ನನ್ನ ತಂದೆಯನ್ನು ನೋಡಿಯೇ ಕಲಿತಿರುವುದು. ಅವರು ತುಂಬ ಚೆನ್ನಾಗಿ ಭರತನಾಟ್ಯ ಮತ್ತು ಯಕ್ಷಗಾನ ನೃತ್ಯ ಮಾಡುತ್ತಿದ್ದರು. ಅವರಲ್ಲಿದ್ದ ಪ್ರತಿಭೆಗೆ ಸರಿಯಾದ ಅವಕಾಶ ಸಿಕ್ಕಲೇ ಇಲ್ಲ ಎಂದು ಈಗಲೂ ನನಗೆ ಅನಿಸುತ್ತಿರುತ್ತದೆ. ತುಂಬ ಸಲ ಮನೆಯಲ್ಲಿಯೇ ಡಾನ್ಸ್ ಮಾಡುತ್ತಿದ್ದರು. ನಮ್ಮ ಎಸ್ಟೇಟ್‌ನಲ್ಲಿ ಹಸಿರಿನ ಮಧ್ಯೆ ಭರತನಾಟ್ಯ ಮಾಡುತ್ತಿದ್ದರು. ಅವರ ಎಷ್ಟೋ ನೆನಪುಗಳು ನನ್ನೊಳಗೆ ಇಂದಿಗೂ ಹಸಿರಾಗಿವೆ. ■